ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 12-03-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | | | |
| 2 | | | |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಬಂಗಾರದ ಮನುಷ್ಯ ಖ್ಯಾತಿಯ ನಿರ್ದೇಶಕ ಸಿದ್ದಲಿಂಗಯ್ಯ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ

ಬೆಂಗಳೂರು, ಮಾರ್ಚ್ 12, (ಕರ್ನಾಟಕ ವಾರ್ತೆ)

ಬಂಗಾರದ ಮನುಷ್ಯ, ಭೂತಯ್ಯನ ಮಗ ಅಯ್ಯು ನಂತಹ ಅದ್ಭುತ ಚಿತ್ರಗಳನ್ನು ನಿರ್ದೇಶಿಸಿ ಕನ್ನಡ ಚಿತ್ರ ರಸಿಕರಿಗೆ ಅರ್ಪಿಸಿ ಜನಪ್ರಿಯತೆ ಗಳಿಸಿದ್ದ ಶ್ರೀ ಸಿದ್ದಲಿಂಗಯ್ಯ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕನ್ನಡ ಚಿತ್ರರಂಗಕ್ಕೆ ಬೆಳಕಿನ ಹುಡುಗನಾಗಿ (ಲೈಟ್ ಬಾಯ್) ಪ್ರವೇಶಿಸಿ, ನಂತರ ಇಡೀ ಕನ್ನಡ ಚಿತ್ರರಂಗಕ್ಕೇ ಬೆಳಕಾದ ಶ್ರೀ ಸಿದ್ದಲಿಂಗಯ್ಯ ಅವರ ಯಶೋಗಾಥೆ ದಾಖಲಾರ್ಹ. ಶ್ರೀ ಸಿದ್ದಲಿಂಗಯ್ಯ ಅವರು ನಿರ್ದೇಶಿಸಿದ್ದ ಚಿತ್ರಗಳೆಲ್ಲವೂ ಭಾವನಾತ್ಮಕ ಅಂಶಗಳಿಂದ ಕೂಡಿ, ಎಲ್ಲರ ಹೃನ್ಮನಗಳನ್ನು ಸೆಳೆಯುತ್ತಿದ್ದವು. ಪ್ರತಿಭಾವಂತ ನಿರ್ದೇಶಕ ಶ್ರೀ ಸಿದ್ದಲಿಂಗಯ್ಯ ಅವರ ನಿಧನದಿಂದ ಕನ್ನಡ ಚಿತ್ರರಂಗದ ಪ್ರಭೆ ಕಳೆಗುಂದಿದಂತಾಗಿದೆ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ಬಣ್ಣಿಸಿದ್ದಾರೆ.

ಡಿಪಿಎಂ/ಕೆಎಂ

## ರಣಜಿ ಕ್ರಿಕೆಟ್‌ನಲ್ಲಿ ಕರ್ನಾಟಕಕ್ಕೆ ಗೆಲುವು : ಮುಖ್ಯಮಂತ್ರಿ ಹರ್ಷ

ಬೆಂಗಳೂರು, ಮಾರ್ಚ್ 12, (ಕರ್ನಾಟಕ ವಾರ್ತೆ)

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ರಣಜಿ ಕ್ರಿಕೆಟ್ ಅಂತಿಮ ಪಂದ್ಯಾವಳಿಯಲ್ಲಿ ಕರ್ನಾಟಕಕ್ಕೆ ಅಭೂತಪೂರ್ವ ಅರ್ಹ ಗೆಲುವು ಸಾಧಿಸಿದ್ದಕ್ಕಾಗಿ ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯ ರಣಜಿ ಕ್ರಿಕೆಟ್ ತಂಡವನ್ನು ಅಭಿನಂದಿಸಿದ್ದಾರೆ.

ಕರ್ನಾಟಕ ತರುಣ ಆಟಗಾರರು 1973-74 ರಲ್ಲಿ ಮೊದಲಬಾರಿ ರಣಜಿ ಟ್ರೋಫಿ ತಮ್ಮದಾಗಿಸಿಕೊಂಡಿದ್ದರು. ರಾಜ್ಯ ತಂಡವು ಈ ಬಾರಿಯು ಸೇರಿ ಎಂಟನೇ ಬಾರಿಗೆ ರಣಜಿ ಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ. ಈ ಬಾರಿಯ ಕರ್ನಾಟಕದ ಯುವ ಕ್ರಿಕೆಟ್ ಪ್ರತಿಭೆಗಳು ಸತತ ಎರಡನೇ ಬಾರಿ ಅರ್ಹ ಗೆಲುವನ್ನು ದಾಖಲಿಸುವ ಮೂಲಕ ರಣಜಿ ಟ್ರೋಫಿಯ ವಿಜಯಶಾಲಿಯಾಗಿರುವುದು ರಾಜ್ಯದ ಕ್ರಿಕೆಟ್ ಇತಿಹಾಸಕ್ಕೆ ಮೆರಗು ತಂದಿದೆ ಎಂದು ಶ್ರೀ ಸಿದ್ದರಾಮಯ್ಯ ಅವರು ಸಂದೇಶದಲ್ಲಿ ತಿಳಿಸಿದ್ದಾರೆ.

ಡಿಪಿಎಂ/ಬಾಬು/ಕೆಎಂ

## ವಾರ್ಷಿಕ ಸರಕು ಪರಿಶೀಲನೆ

ಬೆಂಗಳೂರು, ಮಾರ್ಚ್ 12, (ಕರ್ನಾಟಕ ವಾರ್ತೆ)

2014-15 ನೇ ಸಾಲಿನ ವಾರ್ಷಿಕ ಸರಕು ಪರಿಶೀಲನೆಯ ಪ್ರಯುಕ್ತ ಬೆಂಗಳೂರು, ಮೈಸೂರು ಗುಲ್ಬರ್ಗಾ ಹಾಗೂ ಧಾರವಾಡಗಳಲ್ಲಿರುವ ಸರ್ಕಾರಿ ಲೇಖನ ಸಾಮಗ್ರಿ ಉಗ್ರಾಣಗಳಲ್ಲಿ ದಿನಾಂಕ 01-04-2015 ರಿಂದ 15-04-2015 ರವರೆಗೆ ಎಲ್ಲಾ ಸರ್ಕಾರಿ ಕಚೇರಿಗಳಿಗೆ ಲೇಖನ ಸಾಮಗ್ರಿಗಳ ಮತ್ತು ಕಾಗದದ ನೀಡಿಕೆಯನ್ನು ನಿಲ್ಲಿಸಲಾಗುತ್ತಿದೆ ಎಂಬ ವಿಷಯವನ್ನು ಸಂಬಂಧಿಸಿದ ಎಲ್ಲಾ ಸರ್ಕಾರಿ ಕಚೇರಿ ಹಾಗೂ ಅರೆ ಸರ್ಕಾರಿ ಕಚೇರಿಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

ಬಾಬು:ಜಿಪಿಆರ್.

## ANNUAL STOCK VERIFICATION

**Bangalore, March 15, (Karnataka Information)**

**It is hereby notified for the information of all the Government and Semi Government Offices that there will be no issue of stationery articles and papers from the Government stationery Depot Bengaluru, Mysore, Gulbarga**

and Dharwad from 01-04-2015 to 15-04-2015 (Both days inclusive) on account of Annual Stock Verification for the year 2014-2015.

babu/gpr.

## ರಾಜ್ಯ ಬಜೆಟ್, ಆರ್ಥಿಕ ಸಮೀಕ್ಷೆ ಪುಸ್ತಕಗಳು ಮಾರಾಟಕ್ಕೆ

ಬೆಂಗಳೂರು, ಮಾರ್ಚ್ 12, (ಕರ್ನಾಟಕ ವಾರ್ತೆ)

2015–16ನೇ ಸಾಲಿನ ರಾಜ್ಯ ಆಯವ್ಯಯ ಭಾಷಣದ ಪುಸ್ತಕವನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಮುದ್ರಿಸಲಾಗುತ್ತಿದ್ದು, ಈ ಪುಸ್ತಕಗಳನ್ನು ಮಾರಾಟಕ್ಕೆ ಮಾರ್ಚ್ 13 ರ ಮಧ್ಯಾಹ್ನ 3.30 ಗಂಟೆ ನಂತರ ಮಾರಾಟಕ್ಕೆ ಲಭ್ಯವಾಗಲಿದೆ. ಪ್ರತಿ ಪುಸ್ತಕದ ಬೆಲೆ ರೂ 50/– ಆಗಿದೆ.

ಇದಲ್ಲದೆ ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ 2014–15 ಪುಸ್ತಕವನ್ನು ಕನ್ನಡ ಮತ್ತು ಆಂಗ್ಲ ಭಾಷೆ ಆವೃತ್ತಿಯಲ್ಲಿ ಮುದ್ರಿಸಿ ಪ್ರಕಟಿಸಲಾಗುತ್ತಿದೆ. ಇದರ ಬೆಲೆ ಕನ್ನಡ ರೂ 920/–. ಆಂಗ್ಲ ರೂ 864/– ಆಗಿದೆ. ಈ ಪುಸ್ತಕಗಳು ಬೆಂಗಳೂರಿನ ಸರ್ಕಾರಿ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಲಭ್ಯವಿರುತ್ತದೆ.

ಮಾರ್ಚ್ 16 ರ ನಂತರ ಮೈಸೂರು, ಧಾರವಾಡ, ಕಲಬುರಗಿಯಲ್ಲಿನ ಸರ್ಕಾರಿ ಪುಸ್ತಕ ಮಳಿಗೆಗಳಲ್ಲೂ ಮಾರಾಟಕ್ಕೆ ಲಭ್ಯವಿರುತ್ತದೆ. ಕರ್ನಾಟಕ ಆರ್ಥಿಕ ಸಮೀಕ್ಷೆ 2014–15 ನೇ ಸಾಲಿನ ಪುಸ್ತಕವು ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾಗಿದ್ದು ಕರ್ನಾಟಕ ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನ ಅಂಕಿ ಅಂಶಗಳನ್ನು ಒಳಗೊಂಡಿದೆ ಎಂದು ರಾಜ್ಯ ಮುದ್ರಣ, ಲೇಖನ ಸಾಮಾಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರು ತಿಳಿಸಿದ್ದಾರೆ.

ಬಾಬು:ಜಿಪಿಆರ್.

## STATE BUDGET, ECONOMIC SUVERY OF KARNATAKA 2014-15 BOOKS FOR SALE

**Bangalore, March 12 (Karnataka Information)**

**2015-16 Budget Speech copies in Kannada and English are released for sale to general public at Government Central Book Depot, Bengaluru from 13-3-2015 at 3-30 p.m. onwards. Price Kannada/English Rs. 50/- (inclusive of tax). Further, "Economic Survey of Karnataka 2014-15" books are also printed both in English & Kannada. The Book has been attractively designed and printed by using high quality Paper and are available for sale at Government Central Book Depot Bengaluru. Copies are available for sale at Government Book Depots at Mysore, Dharwad, Kalaburugi also from 16-3-2015 onwards. Price: Kannada Rs 920/- and English Rs 860/-. (inclusive of Tax) This book is helpful for the candidates who appear for competitive exams like IAS, KAS and other departmental exams. The book also provides**

**vast and vital information regarding the statistical information of the Karnataka State. Hence it is requested to General Public and Prospective Candidates to make use of the books.**
**babu:gpr**